ಸಾಧಿಸಲು ಹೊರಟಿದ್ದಾನೋ ಯಾರಿಗ್ಗೊತ್ತು? ಇರಲಿ ನಮ್ಮ ಹಾಗೆ ಅವನೂ ಪ್ರಕೃತಿಯ ಶಿಶುವಲ್ಲವೇ?

'ಅತ್ತೆ ಸಿಟ್ಟು ಕೊತ್ತಿ ಮೇಲೆ' ಎಂಬ ಗಾದೆಯಿದ್ದರೂ ಸೊಸೆ ತನ್ನ ಸಿಟ್ಟನ್ನು ತೋರಿಸಲು ಅಡಿಗೆಮನೆಯಲ್ಲಿ ಬಿದ್ದುಕೊಂಡಿರುವ ಈ ಪ್ರಾಣಿಗೆ ಹೊಡೆದಂತೆ ನಟಿಸಿರಬಹುದು, ಅಷ್ಟೇ. ಪೆಟ್ಟುತಿಂದು ಸಹಿಸಿಕೊಂಡು ಅದೇ ಮನೆಯಲ್ಲಿ ಇರಲು ಅದೇನು ಸ್ವಾಭಿಮಾನವಿಲ್ಲದ ನಾಯಿಯೇ? ರತ್ನಾಕರವರ್ಣಿಯ 'ಭರತೇಶವೈಭವ'ದ ಬಾಹುಬಲಿಯು ತನ್ನಣ್ಣ ಭರತನನ್ನು ಹೊಗಳಿದ ಆಸ್ಥಾನಿಕರನ್ನು ಹೆದರಿಸಲು ಅಲ್ಲಿದ್ದ ಹೆಂಗಸರನ್ನು ಅಟ್ಟಾಡಿಸಿಕೊಂಡು ಹೊಡೆಯುತ್ತಾನೆ. ಆ ಸಂದರ್ಭದಲ್ಲಿ ಕವಿಯು 'ಬೆಕ್ಕನ್ನು ಓಡಿಸಲು ಮೊರವನ್ನು ಬಡಿದಂತೆ' ಎಂಬ ಗಾದೆಯನ್ನು ಬಳಸಿದ್ದಾನೆ. ಅತ್ತೆಗೊಂದು ಕಾಲ ಕೊತ್ತಿಗೊಂದು ಕಾಲ ಅಂತ ಯಾರಾದರು ಗಾದೆ ಮಾಡಿದರೆ ನಿಃಸ್ಸಂಶಯವಾಗಿ ಎಲ್ಲ ಕಾಲವೂ ಕೊತ್ತಿಯದೇ ಆಗಿರುತ್ತದೆ ಏಕೆಂದರೆ, ಎಲ್ಲ ಕಾಲಗಳಲ್ಲಿಯೂ, ಎಲ್ಲ ವೇಳೆಗಳಲ್ಲಿಯೂ ಕ್ಯಾಟ್ ಎಂಬುದು ಮನುಜನ ಮುದ್ದಿನ ಪೆಟ್ ಆಗಿಯೇ ಆಗಿರುತ್ತದಲ್ಲಾ... ಪ್ರೊಫೆಸರರ ವಿಮರ್ಶೆ ಈಗ ಬೊಮ್ಮನಹಳ್ಳಿಯತ್ತ ನಡೆದಿತ್ತು... 'ನೋಡಿ... ಈ ಇಲಿಗಳ ಮಾರಣಹೋಮ ಜಾಗತಿಕವಾಗಿ ಊಳಿಗಮಾನ್ಯ ಪದ್ಧತಿಯು ಪರಿಸರಕ್ಕೆ ಮಾಡಿದ ಬಹಳ ದೊಡ್ಡ ಅಪಚಾರ ಹಾಗೂ ಪ್ರಾಣಿಗಳ ಮೇಲೆ ಜಾಗತಿಕವಾಗಿ ಅಮಾನುಷವಾಗಿ ಮಾನವ ದಾಖಲಿಸಿದ ಮೊತ್ತ ಮೊದಲ ವಿಶ್ವಾಸದ್ರೋಹ ಪ್ರಕರಣ...'

**ಕೊನೆಯೊಗ್ಗರಣೆ:**

'ಬೆಕ್ಕೇ ಬೆಕ್ಕೇ ಈಗಲೆ ಹೇಳು
ಅರಮನೆ ವೈಭವದಾನಂದ
ಅಂತಃಪುರದೊಳ ಬಿದ್ದಿತು ಎಂದ
ನಿನ್ನಯ ಕನಸಿನ ಆ ಚಂದ'

'ಗದ್ದಲದಲ್ಲೇ ನಿದ್ದೆಯು ಹತ್ತಿತು
ತೇಲುತ ಬಂದಿತು ಮೀನೊಂದು
ಹೊಳೆಯುವ ಮೀನನು ಹಿಡಿಯಲು ಹಾರಿ
ಮಂಚದಿ ಬಿದ್ದೆನು ಧೊಪ್ಪೆಂದು'

(ದಿನಕರ ದೇಸಾಯಿ ಅವರ 'ಬೆಕ್ಕೇ ಬೆಕ್ಕೇ' ಪದ್ಯದ ಮುಂದುವರಿದ ಭಾಗ)

**ರೇಶ್ಮಾ ಭಟ್**

ಹುಟ್ಟೂರು ಕೊಡಗಿನ ವಿರಾಜಪೇಟೆ. ಪ್ರಸ್ತುತ ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ನಿವಾಸಿ. ವೃತ್ತಿಯಲ್ಲಿ ಉಪನ್ಯಾಸಕಿ. 'ನವೆ ನವೋನ್ಮೇಷಶಾಲಿನೀ' ಪ್ರಕಟಿತ ಪ್ರಬಂಧ ಸಂಕಲನ. ಕತೆ, ಲಲಿತ ಪ್ರಬಂಧ, ಲೇಖನ, ಕವನ, ಹನಿಗತೆಗಳು, ಹನಿಗವನಗಳು ನಾಡಿನ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಅಂತರ್ಜಾಲ ಪತ್ರಿಕೆಯಲ್ಲಿ ಅಂಕಣಗಾರ್ತಿ. ಹವ್ಯಾಸಿ ಗಮಕಿ ಹಾಗೂ ಆಕಾಶವಾಣಿ ಬಿ ಗ್ರೇಡ್ ಕಲಾವಿದೆ.